**ಹೆಚ್ಚುವರಿ ಹಿರಿಯ  ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಸಾಗರ**

**ಸಿ.ಸಿ. ನಂ.1586/2024**

| | | |
|---|---|---|
| ಸಾಕ್ಷಿದಾರರ ಹೆಸರು | : | ರಾಮಪ್ಪ |
| ತಂದೆಯ/ಗಂಡನ ಹೆಸರು | : | ನಾರಾಯಣಪ್ಪ |
| ವಯಸ್ಸು | : | 49 ವರ್ಷ |
| ಉದ್ಯೋಗ | : | ರೈತ |
| ವಾಸಃ | : | ಗಡೆಮನೆ |

ಸಿ ಡಬ್ಲ್ಯೂ-3       ಪಿ.ಡಬ್ಲ್ಯೂ-3

ದಿನಾಂಕ  04.08.2025 ರಂದು ಸಾಕ್ಷಿಗೆ ಪ್ರಮಾಣ ಭೋಧಿಸಲಾಯಿತು.

ಮುಖ್ಯ ವಿಚಾರಣೆ:- ಸ.ಸ. ಅ ರವರಿಂದಃ

4-5 ವರ್ಷಗಳ ಹಿಂದೆ ಪೊಲೀಸರು ರಾಮ ಮಂದಿರದ ಹತ್ತಿರ ಮಹಜರ್ ಮಾಡಲು ಬಂದಿದ್ದರು.  ಪೊಲೀಸರು ವಸ್ತುಗಳನ್ನು ವಶಪಡಿಸಿಕೊಂಡರೋ ಇಲ್ಲವೂ ಗೊತ್ತಿಲ್ಲ.

ನಿಪಿ-2 ರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಸದರಿ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು.

( ಸಾಕ್ಷಿಯನ್ನು ಸರ್ಕಾರಿ ವಕೀಲರು  ಭಾಗಶಃ ಪ್ರತಿಕೂಲ  ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)

ಪಾಟೀ ಸವಾಲು ಸ.ಸ.ಅ ರವರಿಂದಃ

ದಿಃ28.11.2017 ರಂದು ಪೊಲೀಸರು ಸ್ಥಳ ಮಹಜರ್ ಅನ್ನು ಮಾಡಿರುತ್ತಾರೆ ಎಂದರೆ ಸರಿ.  ಸದರಿ ಸಮಯದಲ್ಲಿ ಮುದ್ದೆಮಾಲು 1 ರಿಂದ 3 ಅನ್ನು ಪೊಲೀಸರು ವಶಪಡಿಸಿಕೂಳ್ಳಲಾಯಿತು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನ್ಯಾಯಾಲಯದ ಮುಂದಿರುವ  ಮುದ್ದೆಮಾಲು 1 ರಿಂದ 3 ಅನ್ನು ಸಾಕ್ಷಿ ನೊಡಿ ಇದೇ

ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂದು ನುಡಿಯುತ್ತಾರೆ.

<u>ಪಾಟೀ ಸವಾಲು ಆರೋಪಿಗಳ ಪರ ವಕೀರಾದ ಶ್ರೀ ಪಿ.ಎಸ್ ರವರಿಂದಃ</u>

ನಿಪಿ-2 ರಲ್ಲಿ ಬರೆದಿರುವ ಅಂಶಗಳನ್ನು ನನಗೆ ಿಗೂತ್ತಿರುವುದಿಲ್ಲ. ನಿಪಿ-2 ಅನ್ನು ಯಾರು ಹೇಗೆ ಬರೆದರು ಎಂದು ನನಗೆ ಗೊತ್ತಿಲ್ಲ. ಆರೋಪಿಗಳು ಮತ್ತು ಚಾಸಾ-1 ರವರು ಒಂದೇ ಸರ್ವೇ ನಂಬರ್ ನ ಜಮೀನನ್ನು ಹೊಂದಿದ್ದು ಅಕ್ಕ ಪಕ್ಕದ ಜಮೀನಿನಲ್ಲಿ ಸ್ವಾಧೀನದಲ್ಲಿದ್ದಾರೆ. ಚಾಸಾ-1 ಮತ್ತು ಆರೋಪಿಗಳ ನಡುವೆ ಮೊದಲಿನಿಂದಲೂ ನೀರಿಗೆ ಸಂಬಂಧಪಟ್ಟಂತೆ ಮನಸ್ತಾಪ ಇದೆ. ನಿಪಿ-2 ಕ್ಕೆ ಪೊಲೀಸರು ಸಹಿ ಮಾಡಲು ಹೇಳಿದ್ದರಿಂದ ನಾನು ಸಹಿ ಹಾಕಿರುತ್ತೇನೆ. ನಿಪಿ-2 ಅನ್ನು ನಾನು ಓದಿ ನೋಡಿರುವುದಿಲ್ಲ ಎಂದರೆ ಸರಿ.

ಮರು ವಿಚಾರಣೆ ಇಲ್ಲ.
(ತೆರೆದ ನ್ಯಾದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ.

ಹೆಚ್ಚುವರಿ ಹಿರಿಯ  ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಸಾಗರ

ಸಿ.ಸಿ. ನಂ.1586/2024

| | |
|---|---|
| ಸಾಕ್ಷಿದಾರರ ಹೆಸರು | : ಅಜ್ಜಪ್ಪ |
| ತಂದೆಯ/ಗಂಡನ ಹೆಸರು | : ನಾರಾಯಣಪ್ಪ |
| ವಯಸ್ಸು | : 37 ವರ್ಷ |
| ಉದ್ಯೋಗ | : ವ್ಯವಸಾಯ |
| ವಾಸಃ | : ಗಡೆಮನೆ |

ಸಿ ಡಬ್ಲ್ಯೂ-2        ಪಿ.ಡಬ್ಲ್ಯೂ-2

ದಿನಾಂಕ  04.08.2025 ರಂದು ಸಾಕ್ಷಿಗೆ ಪ್ರಮಾಣ ಭೋಧಿಸಲಾಯಿತು.

ಮುಖ್ಯ ವಿಚಾರಣೆ:- ಸ.ಸ. ಅ ರವರಿಂದಃ

ದಿಃ26.11.2017 ರಂದು ರಾತ್ರಿ 8 ಗಂಟೆಗೆ ಆರೋಪಿಗಳಿಗೂ ಹಾಗೂ ಚಾಸ-1 ರವರಿಗೆ ಗದ್ದೆಯಲ್ಲಿ ನೀರು ಬಿಡುವ ವಿಚಾರದಲ್ಲಿ ಮೊದಲಿನಿಂದಲೂ ಮನಸ್ತಾಪ ಇತ್ತು. ಈ ಬಗ್ಗೆ ಊರಿನಲ್ಲಿ ಹಳೆ ರಾಮಮಂದಿರ ದೇವಸ್ಥಾನದಲ್ಲಿ ತಿರ್ಮಾನ ಇತ್ತು. ತೀರ್ಮಾನಕ್ಕೆಂದು ನಾನು ಮತ್ತು ಚಾಸಾ-1 ರವರು ರಾಮ ಮಂದಿರ ದೇವಸ್ಥಾನ ರಸ್ತೆಯಲ್ಲಿ ಹೋಗುತ್ತಿದ್ದಾಗ. ಆರೋಪಿ 1 ರಿಂದ 3 ಏಕಾ ಏಕಿ ಚಾಸಾ-1 ರವರನ್ನು ಅಡ್ಡಗಟ್ಟಿ ಅವಾಚ್ಯಶಬ್ದಗಳಿಂದ ಬೈದು ರಸ್ತೆಯ ಅಂಚಿನಲ್ಲಿ ಬಿದ್ದಂತಹ ದೊಣ್ಣೆಯನ್ನು ತೆಗೆದುಕೊಂಡು ತಲೆ, ಬೆನ್ನಿನ ಮೇಲೆ ರಕ್ತಗಾಯವಾಗುವಂತೆ ಹೊಡೆದಿರುತ್ತಾರೆ. ಆಗ ನಾನು ಹಾಗೂ ಬಿಡಿಸಲು ಪ್ರಯತ್ನ ಪಟ್ಟೆ. ಚಾಸಾ-5 ಮತ್ತು 6 ರವರೂ ಸಹ ಜಗಳ ಬಿಡಿಸಲು ಬಂದರು. ಸಾಗರ ಸರ್ಕಾರಿ ಆಸ್ಪತ್ರೆಯಲ್ಲಿ ಚಾಸಾ-1 ರವರನ್ನು ಚಾಸಾ-5 ಮತ್ತು 6 ರವರು ಸೇರಿಸಿರುತ್ತಾರೆ.

ದಿಃ28.11.2017 ರಂದು ಪೊಲೀಸರು ಸ್ಥಳ ಮಹಜರ್ ಅನ್ನು ಮಾಡಿರುತ್ತಾರೆ. ನಾನೇ ಕೃತ್ಯೆ ನಡೆದ ಸ್ಥಳವನ್ನು ತೋರಿಸಿರುತ್ತೇನೆ. ಆ ಸಂದರ್ಬದಲ್ಲಿ ಚಾಸಾ-3 ಮತ್ತು 6

ರವರ ಇದ್ದರು. ಪೊಲೀಸರು ಆರೋಪಿಗಳು ಹೊಡೆದಂತಹ 3 ದೊಣ್ಣೆಗಳನ್ನು ವಶಕ್ಕೆ ಪಡೆದಿರುತ್ತಾರೆ. ಸದರಿ ನ್ಯಾಯಾಲಯದ ಮುಂದಿರುವ ಮುದ್ದೆಮಾಲು 1 ರಿಂದ 3 ಅನ್ನು ಸಾಕ್ಷಿ ನೊಡಿ ಗುರುತಿಸಿರುತ್ತಾರೆ. ನ್ಯಾಯಾಲಯದ ಮುಂದಿರುವಂತಹ ಆರೋಪಿಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ದೊಣ್ಣೆ ಅಲ್ಲದೇ ಕೈಗಳಿಂದಲೂ ಆರೋಪಿಗಳು ಚಾಸಾ-1 ರವರಿಗೆ ಹಲ್ಲೆ ಮಾಡಿರುತ್ತಾರೆ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸದರಿ ಮಹಜರ್ ಅಲ್ಲಿರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗ ಅದನ್ನು ನಿಪಿ-2 ಎಂದು ಸಾಕ್ಷಿ ಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ಪಾಟೀ ಸವಾಲು ಆರೋಪಿಗಳ ಪರಿ ವಕೀಲರಿಂದಃ

ಆರೋಪಿಗಳ ಪರಿ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು ಸೂಕ್ತ ಕಾರಣಗಳು ಇಲ್ಲದೇ ಇರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ.